# ಕರ್ನಾಟಕ ಲೋಕಾಯುಕ್ತ

ಕಂಪ್ಲೇಂಟ್/ಉಪಲೋಕ್/ಬಿಜಿಎಂ/3369/2021
ಪಿ.ಎ.ಆರ್.ಇ-5(ಮಂಡನಾಧಿಕಾರಿಯವರ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 29/04/2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** 1) ಶ್ರೀ. ಜಯವಂತ ಮಾದರ ತಾಯಿ ಇಂದ್ರವ್ವ ಮಾದರ, ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿ, ಜಮಖಂಡಿ, ಜಿಲ್ಲೆ ಬಾಗಲಕೋಟೆ, 2) ಶ್ರೀ ನಿಂಗಪ್ಪ ಸೈದಪ್ಪ ಮೀಸಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಜಮಖಂಡಿ, ಜಿಲ್ಲೆ ಬಾಗಲಕೋಟೆ, ಹಾಗೂ 3) ಶ್ರೀ. ಚಂದ್ರಪ್ಪ ಭೀಮಪ್ಪ ಹರಿಜನ, ಕಾರ್ಯದರ್ಶಿ/ಪ್ರಭಾರ ಪಿ.ಡಿ.ಓ, ತೊದಲಬಾಗಿ ಗ್ರಾಮ ಪಂಚಾಯತ್, ಜಮಖಂಡಿ, ಜಿಲ್ಲೆ ಬಾಗಲಕೋಟೆ ರವರುಗಳು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ಅವರುಗಳ ಮೇಲೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

******

ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೋಲಿಸ್ ಠಾಣೆ, ಬಾಗಲಕೋಟೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **1) ಶ್ರೀ. ಜಯವಂತ ಮಾದರ ತಾಯಿ ಇಂದ್ರವ್ವ ಮಾದರ, ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿ, ಜಮಖಂಡಿ, ಜಿಲ್ಲೆ ಬಾಗಲಕೋಟೆ, 2) ಶ್ರೀ ನಿಂಗಪ್ಪ ಸೈದಪ್ಪ ಮೀಸಿ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಜಮಖಂಡಿ, ಜಿಲ್ಲೆ ಬಾಗಲಕೋಟೆ ಹಾಗೂ 3) ಶ್ರೀ. ಚಂದ್ರಪ್ಪ ಭೀಮಪ್ಪ ಹರಿಜನ, ಕಾರ್ಯದರ್ಶಿ/ಪ್ರಭಾರ ಪಿ.ಡಿ.ಓ, ತೊದಲಬಾಗಿ ಗ್ರಾಮ ಪಂಚಾಯತ್, ಜಮಖಂಡಿ, ಜಿಲ್ಲೆ ಬಾಗಲಕೋಟೆ**(ಇನ್ನು ಮುಂದೆ 1 ರಿಂದ 3ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ)ರವರುಗಳ ಮೇಲೆ **ಶ್ರೀ ರವೀಂದ್ರ ಎಂ. ಕುರಬಗಟ್ಟಿ, ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೋಲಿಸ್ ಠಾಣೆ, ಬಾಗಲಕೋಟೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ, 2011-12ನೇ ಸಾಲಿನಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ತೊದಲಬಾಗಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಅಡಿಹುಡಿ ಗ್ರಾಮದ ಹದ್ದಿನಲ್ಲಿ ಕೈಗೊಳ್ಳಲಾದ 24 ಕಾಮಗಾರಿಗಳಲ್ಲಿ ಕೆಲವು ಕಾಮಗಾರಿಗಳನ್ನು

ಅಪೂರ್ಣವಾಗಿ ಮಾಡಿ, ಕೆಲವು ಕಾಮಗಾರಿಗಳನ್ನು ಮಾಡದೇ ಇದ್ದರೂ ಸಹ, ಮಾಡಿದ ಹಾಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸದರಿ ಕಾಮಗಾರಿಯೊಂದರ ಕೂಲಿ ಕಾರ್ಮಿಕರ ಪಟ್ಟಿಯಲ್ಲಿ ಅಂಗವಿಕಲನ ಹೆಸರನ್ನು ಖೊಟ್ಟಿಯಾಗಿ ಸೇರಿಸಿ, ಅಂಗವಿಕಲನು ಕೆಲಸ ಮಾಡಿದಂತೆ ತೋರಿಸಿ ಮೇಲ್ಕಂಡ ಕಾಮಗಾರಿಗಳಿಂದ ಒಟ್ಟು ರೂ. 8,68,553.17/- ಹಣವನ್ನು ಸರ್ಕಾರಕ್ಕೆ ಮೋಸ ಮಾಡಿ ಸದರಿ ಹಣವನ್ನು ಸ್ವಂತಕ್ಕೆ ಬಳಸಿಕೊಂಡ ಬಗ್ಗೆ ಬರೆದುಕೊಂಡಿದ್ದು, ಸದರಿ ದೂರು ದಿ: 20/06/2012 ರಂದು ಬಾಗಲಕೋಟೆ ಲೋಕಾಯುಕ್ತಾ ಪೋಲಿಸ್ ಠಾಣಾ ಗುನ್ನಾ ನಂ. 09/2012 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 13(1)(ಸಿ) 13(2) ಹಾಗೂ ಐ.ಪಿ.ಸಿ ಕಲಂ 420, 468, 471 ರ ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ ಎದುರುದಾರರುಗಳು ಸಾರ್ವಜನಿಕ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಮೇಲ್ಕಂಡತೆ ಅಪರಾಧ ನಡೆಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2) ರ ಅನ್ವಯ ಗೌರವಾನ್ವಿತ ಲೋಕಾಯುಕ್ತರು ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಎದುರುದಾರರ ಮೇಲಿನ ದೂರಿನ ಸಂಕ್ಷಿಪ್ತ ಸಾರಾಂಶ:**

I. ಶ್ರೀ ಮಹದೇವ ಭೀಮಪ್ಪ ಜಿರಳೆ, ಸಾ: ಅಡಿಹುಡಿ ಇವರು ಅಡಿಹುಡಿ ಗ್ರಾಮದಲ್ಲಿ ನರೆಗಾ ಯೋಜನೆ ಅಡಿಯಲ್ಲಿ ಕೈಗೊಂಡ ಈ ಕೆಳಗೆ ನಮೂದಿಸಿದ 24 ಕಾಮಗಾರಿಗಳು ಯೋಜನೆಯ ಮಾರ್ಗಸೂಚಿ ಅನ್ವಯ ನಡೆದಿಲ್ಲವೆಂದು ದಿನಾಂಕ: 16-04-2022 ರಂದು ದೂರು ಸಲ್ಲಿಸಿದ್ದು, ಸದರಿ ದೂರಿನ ಅನ್ವಯ ಅನಿಲ್ ಕುಮಾರ್ ಭೂಮರೆಡ್ಡಿ, ಪೋಲಿಸ್ ನೀರಿಕ್ಷಕರು, ಕ.ಲೋ, ಬಾಗಲಕೋಟೆ, ಇವರು ದಿನಾಂಕ: 20/04/2012 ರಂದು ಪ್ರಾಥಮಿಕ ವಿಚಾರಣೆಯನ್ನು ಕೈಗೊಂಡು ಈ ಪ್ರಕರಣಕ್ಕೆ ಸಂಬಂಧಿಸಿದ 24 ಕಾಮಗಾರಿಗಳನ್ನು ಪರಿಶೀಲಿಸಿರುತ್ತಾರೆ.

II. ಅನಿಲ್‌ಕುಮಾರ್ ಭೂಮರೆಡ್ಡಿ, ಪೋಲೀಸ್ ಇನ್ಸ್‌ಪೆಕ್ಟರ್, ಕ.ಲೋ ಬಾಗಲಕೋಟೆ ಇವರು 1 ರಿಂದ 3 ನೇ ಎದುರುದಾರರು ಮಾಡಿದ 24 ಕಾಮಗಾರಿಗಳಲ್ಲಿ 10 ಲಕ್ಷಕ್ಕೂ ಅಧಿಕ ಮೊತ್ತದ ಅವ್ಯವಹಾರ ಮಾಡಿರುವುದು ಮೇಲ್ನೋಟದಲ್ಲಿ ಕಂಡುಬಂದಿದ್ದರಿಂದ ಮೇಲೆ ನಮೂದಿಸಿದ ಕಲಂಗಳ ಅನ್ವಯ ಕ್ರಿಮಿನಲ್ ಮೊಕದ್ದಮೆ ದಾಖಲಿಸಿಕೊಂಡು ತನಿಖೆ ಮಾಡಲು ಅನುಮತಿ ಪಡೆದುಕೊಂಡಿರುತ್ತಾರೆ.

ಶ್ರೀ ರವಿಂದ್ರ ಕುರುಬಗಟ್ಟಿ, ಪೋಲಿಸ್ ನೀರಿಕ್ಷಕರು, ಕ.ಲೋ ಬಾಗಲಕೋಟೆ ಇವರು ಸರ್ಕಾರದ ಪರವಾಗಿ 1 ರಿಂದ 3 ನೇ ಎದುರುದಾರರ ವಿರುದ್ಧ ದೂರು ಸಲ್ಲಿಸಿದ್ದು, ಸದರಿ ದೂರು ಬಾಗಲಕೋಟೆ ಲೋಕಾಯುಕ್ತ ಪೋಲೀಸ್ ಠಾಣೆ ಗುನ್ನಾ ನಂ. 09/2012 ರಲ್ಲಿ ದಿನಾಂಕ: 20-06-2012 ರಂದು ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 13(1)(ಸಿ) ರೆ/ವಿ 13(2) ಹಾಗೂ ಐ.ಪಿ.ಸಿ ಕಲಂ 420, 468, 471 ಅಡಿಯಲ್ಲಿ ದಾಖಲಾಗಿರುತ್ತದೆ.

III. ಪ್ರಕರಣವು ದಾಖಲಾದ ನಂತರ ಪಂಚರಾದ 1) ಶ್ರೀ.ಮಲ್ಲಪ್ಪ ಆದರಗಿ 2) ಶ್ರೀ.ಮಂಜುನಾಥ ಭಜಂತ್ರಿ ಇವರುಗಳನ್ನು ಬರಮಾಡಿಕೊಂಡು ತೊದಲಬಾಗಿ ಗ್ರಾಮ ಪಂಚಾಯಿತಿಗೆ ದಿನಾಂಕ: 21-06-2012 ರಂದು ಭೇಟಿ ನೀಡಿ, ಈ ಪ್ರಕರಣದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಂಚಾಯಿತಿಯ ಗುಮಾಸ್ತರಾದ ಯು.ಡಿ.ದಂಡಿನ ಮತ್ತು ಎಂ.ಎನ್. ಮಾದರ, ವಸೂಲಿ ಕ್ಲರ್ಕ ಇವರುಗಳು ಹಾಜರುಪಡಿಸಿದ ಕಡತಗಳನ್ನು ಮತ್ತು ಕಾಮಗಾರಿಗಳಿಗೆ ಸಂಬಂಧಿಸಿದ ಅಳತೆ ಪುಸ್ತಕ ಮತ್ತು ನಗದು ಪುಸ್ತಕಗಳನ್ನು ಮಹಜರ್ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತಾರೆ.

IV. ಮುಂದುವರೆದು, ತನಿಖಾಧಿಕಾರಿಗಳು ಪಂಚರಾದ 1) ಶ್ರೀ. ಯಲಗೂರೇಶ ಮಾಳಪ್ಪಹಳ್ಳಿ, 2) ಶ್ರೀ.ಸಂಗನಬಸು ಗಂಗಪ್ಪ ಹೆಳವರ್ ಇವರುಗಳನ್ನು ಬರಮಾಡಿಕೊಂಡು ದಿನಾಂಕ: 27-11-2012 ರಂದು ತೊದಲಬಾಗಿ ಗ್ರಾಮ ಪಂಚಾಯಿತಿಗೆ ಹೋಗಿ ಪಂಚಾಯಿತಿಯ ನೌಕರರಾದ ಯು.ಡಿ. ದಂಡಿನ, ಎಂ.ಎನ್.ಮಾದರ ಹಾಗೂ ಶ್ರೀ ಪವಾರ್ ಗ್ರಾಮಲೆಕ್ಕಾಧಿಕಾರಿ ತೊದಲಬಾಗಿ ಇವರ ಸಮಕ್ಷಮದಲ್ಲಿ 15 ಕಾಮಗಾರಿಗಳನ್ನು ಪರಿಶೀಲನೆ ಮಾಡಿ ಮಹಜರ್ ಕ್ರಮ ಜರುಗಿಸಿರುತ್ತಾರೆ.

V. ದಿನಾಂಕ: 28-11-2012 ರಂದು ಮೇಲೆ ಹೇಳಿದ ಪಂಚರು ಹಾಗೂ ಗ್ರಾಮಲೆಕ್ಕಾಧಿಕಾರಿಯೊಂದಿಗೆ 8 ಕಾಮಗಾರಿಗಳನ್ನು ಪರಿಶೀಲನೆ ಮಾಡಿ ಮಹಜರ್ ಕ್ರಮ ಜರುಗಿಸಿರುತ್ತಾರೆ.

VI. ತನಿಖಾಧಿಕಾರಿಗಳು ದಿನಾಂಕ: 01-08-2012 ರಂದು ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿ, ಜಮಖಂಡಿ ಇವರಿಂದ ಕಾಮಗಾರಿಗಳ ವಿವರಗಳನ್ನು ಪಡೆದುಕೊಂಡಿರುತ್ತಾರೆ. ಎದುರುದಾರರುಗಳಿಗೆ ಸಂಬಂಧಿಸಿದಂತೆ ಸೇವಾ ವಿವರಗಳನ್ನು ಅವರ ಹಿರಿಯ ಅಧಿಕಾರಿಗಳಿಂದ ಪಡೆದುಕೊಂಡಿರುತ್ತಾರೆ. ತಹಶೀಲ್ದಾರ್, ಜಮಖಂಡಿ ಇವರಿಂದ ಕಾಮಗಾರಿ ನಡೆದ ಜಮೀನುಗಳ ಪಹಣಿ ಪತ್ರಿಕೆಗಳನ್ನು ಮತ್ತು ಅಡಿಹುಡಿ ಗ್ರಾಮದ ನಕ್ಷೆಯನ್ನು ಪಡೆದುಕೊಂಡಿರುತ್ತಾರೆ. ದಿನಾಂಕ: 18-11-2015 ರಂದು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಜಮಖಂಡಿ, ಇವರಿಂದ ಮಸ್ಟರ್ ರೋಲ್ ಮತ್ತು ಸಾಮಾಗ್ರಿ ವೆಚ್ಚಗಳ ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ.

VII. ದಿನಾಂಕ: 16-05-2016 ರಂದು 1 ರಿಂದ 3ನೇ ಎದುರುದಾರರ ಮಾದರಿ ಸಹಿ ಹಾಗೂ ಕೋರಿಕೆಯ ಕೈಬರಹಗಳನ್ನು ಪಂಚರ ಸಮಕ್ಷಮ ಪಡೆದುಕೊಂಡು, ವಿಧಿ ವಿಜ್ಞಾನ ಪ್ರಯೋಗಲಾಯಕ್ಕೆ ಕಳುಹಿಸಿ ಎಫ್.ಎಸ್.ಎಲ್ ವರದಿಯನ್ನು ಪಡೆದುಕೊಂಡಿರುತ್ತಾರೆ.

VIII. ಗೌರವಾನ್ವಿತ ಲೋಕಾಯುಕ್ತರು ದಿನಾಂಕ: 21-08-2014 ರಂದು ಬಾಗಲಕೋಟೆಗೆ ಭೇಟಿ ನೀಡಿದಾಗ ಗೌರವಾನ್ವಿತರ ನಿರ್ದೇಶನದ ಮೇರೆಗೆ ಕಾಮಗಾರಿಯ ಕುರುಹುಗಳು ನಾಶವಾಗುವ ಸಾಧ್ಯತೆ ಇರುವುದರಿಂದ ಬೇರೆ ಜಿಲ್ಲೆಯ ಇಂಜಿನಿಯರ್‌ಗಳ ಸಹಾಯ ಪಡೆದು ಕಾಮಗಾರಿಗಳ ಮೌಲ್ಯ ಮಾಪನ ಮಾಡಿಸಲು ಆದೇಶಿಸಿದ ಮೇರೆಗೆ ಮುಖ್ಯ ಇಂಜಿನಿಯರ್, ಧಾರವಾಡ ಇವರು ಆರ್.ಬಿ ದ್ಯಾಮಣ್ಣವರ್, ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ಇವರಗಳನ್ನೊಳಗೊಂಡ ತಂಡವನ್ನು ರಚಿಸಿದ್ದು, ಸದರಿ ತಂಡದೊಂದಿಗೆ ದಿನಾಂಕ: 07/09/2015 ರಂದು 4 ಸ್ಥಳಗಳಿಗೆ ಹಾಗೂ ದಿ:21/10/2015 ರಂದು 20 ಕಾಮಗಾರಿ ನಡೆದ ಸ್ಥಳಗಳಿಗೆ ಭೇಟಿ ನೀಡಿ

ಪರಿಶೀಲನೆ ಮಾಡಿ ವಿವರವಾದ ವರದಿಯನ್ನು ಈ ಕೆಳಕಡಂತೆ ದಿನಾಂಕ: 05-11-2015 ರಂದು ನೀಡಿರುತ್ತಾರೆ.

| ಕ್ರ. ಸಂ | ಕಾಮಗಾರಿಗಳ ವಿವರ | Amount withdrawn | Value of work as per site measurement | Misappropriated amount | ಷರಾ |
|---|---|---|---|---|---|
| 1. | ಅಡಿಹುಡಿ ಗ್ರಾಮದ ಕುಲಕರ್ಣಿ ವಸತಿಯಿಂದ ಮೋರೆ ವಸತಿವರೆಗೆ ಬಸಿ ಕಾಲುವೆ ನಿರ್ಮಾಣ ಕಾಮಗಾರಿ | 1,31,120-00 | 58,216-86 | 72,903-14 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ |
| 2. | ಅಡಿಹುಡಿ ಗ್ರಾಮದ ಚೌರಿ ಶಾಲೆಯಿಂದ ಸಾವಳಗಿ ರಸ್ತೆವರೆಗೆ ರಸ್ತೆ ನಿರ್ಮಾಣ ಕಾಮಗಾರಿ | 83,815-00 | 46,111-97 | 37,703-03 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ |
| 3. | ಅಡಿಹುಡಿ ಗ್ರಾಮದ ಮಂಟೂರು ವಸತಿಯಿಂದ ತೊದಲಬಾಗಿ ರಸ್ತೆ ಸುಧಾರಣೆ ಕಾಮಗಾರಿ | 90,780-00 | 33,503-87 | 57,276-13 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ |
| 4. | ಅಡಿಹುಡಿ ಗ್ರಾಮದ ಸಂಗಮೇಶ್ವರ ಮಠದಿಂದ ಅಡಿವೆಪ್ಪ ಕೆಸರಗೊಪ್ಪ ಜಮೀನಿನವರೆಗೆ ರಸ್ತೆ ಕಾಮಗಾರಿ | 1,01,880-00 | 25,254-99 | 76,625-01 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ |
| 5. | ಅಡಿಹುಡಿ ಗ್ರಾಮದ ಸಾವಳಗಿ ರಸ್ತೆಯಿಂದ ಸಂಗಪ್ಪ ಗುಗ್ಗರಿ ಇವರ ಜಮೀನಿನವರೆಗೆ ಹಳ್ಳದ ಹೊಳು ಎತ್ತುವ ಕಾಮಗಾರಿ | 1,41,473-00 | - | - | ಸದರಿ ಕಾಮಗಾರಿಯು ಸನ್2011-12 ನೇ ಸಾಲಿನಲ್ಲಿ ಆಗಿದ್ದು ಕಾಮಗಾರಿ ಕುರುಹುಗಳು ಲಭ್ಯವಿರದೇ ಇರುವುದರಿಂದ ಹಾಗೂ ಅಳತೆ ಪುಸ್ತಕದಲ್ಲಿ ಹಾಗೂ ಅಂತಿಮ ಹಂತ ನಮೂದಿಸದೇ ಇರುವುದರಿಂದ ಮೌಲ್ಯ ಮಾಪನ ಮಾಡಲು ಸಾಧ್ಯವಾಗಿರುವುದಿಲ್ಲ. |
| 6. | ಅಡಿಹುಡಿ ಗ್ರಾಮದ ಗದ್ಯಾಳ ರಸ್ತೆಯಿಂದ ದೊಂಡಿಬಾ ಶಿಂಧೆ ರಸ್ತೆ ಸುಧಾರಣೆ ಕಾಮಗಾರಿ | 49,870-00 | 16,841-56 | 33,028-44 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ. |

| | | | | | |
|---|---|---|---|---|---|
| 7. | ಅಡಿಹುಡಿ ಗ್ರಾಮದ ಗದ್ಯಾಳ ರಸ್ತೆಯಿಂದ ಶಂಕರ ಶಿಂಧೆ ವಸ್ತಿವರೆಗೆ ರಸ್ತೆ ಸುಧಾರಣೆ ಕಾಮಗಾರಿ | 49,620–00 | 20,477–12 | 29,142–88 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ |
| 8. | ಅಡಿಹುಡಿ ಗ್ರಾಮದ ಹಣಮಂತ ರಾಮಪ್ಪ ಹಳ್ಳೂರು ಇವರ ಜಮೀನಿನಲ್ಲಿ ತೆರದ ಭಾವಿ ನಿರ್ಮಾಣ ಕಾಮಗಾರಿ | 2,03,045–00 | – | 2,03,045–00 | ಕಾಮಗಾರಿ ಆದೇಶದಲ್ಲಿ ತೋರಿಸಿದ ಸ್ಥಳದಲ್ಲಿ ಕೆಲಸ ಮಾಡಿರುವುದಿಲ್ಲ. |
| 9. | ತೊದಲಬಾಗಿ ಮತ್ತು ಅಡಿಹುಡಿ ಗ್ರಾಮದ ಮಹಾದೇವ ಕೃಷ್ಣಾ ಶಿಂಧೆ ಇವರ ಜಮೀನ ಪಕ್ಕದ ಹಳ್ಳದ ಹೂಳು ಎತ್ತುವ ಕಾಮಗಾರಿ | 1,57,384–20 | – | – | ಸದರಿ ಕಾಮಗಾರಿಯು ಸನ್ 2011–12ನೇ ಸಾಲಿನಲ್ಲಿ ಆಗಿದ್ದು, ಕಾಮಗಾರಿಗಳ ಕುರುಹುಗಳು ಲಭ್ಯವಿರದೇ ಇರುವುದರಿಂದ ಹಾಗೂ ಅಳತೆ ಪುಸ್ತಕದಲ್ಲಿ ಪ್ರಾಥಮಿಕ ಹಾಗೂ ಅಂತಿಮ ಹಂತಗಳನ್ನು ನಮೂದಿಸದೇ ಇರುವುದರಿಂದ ಮೌಲ್ಯ ಮಾಪನ ಮಾಡಲು ಸಾಧ್ಯವಾಗಿರುವುದಿಲ್ಲ. |
| 10. | ಅಡಿಹುಡಿ ಗ್ರಾಮ ಉರ್ದು ಶಾಲೆಗೆ ರಕ್ಷಣಾಗೋಡೆ ನಿರ್ಮಾಣ ಕಾಮಗಾರಿ | 1,97,821–71 | 1,25,013–70 | 72,808–01 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ. |
| 11. | ಅಡಿಹುಡಿ ಗ್ರಾಮದ ಶ್ರೀ ಧರೆಪ್ಪ ಶಿವಪ್ಪ ಗುಗ್ಗರಿ ಇವರ ಹೊಲದಿಂದ ಶಿದಗೊಂಡ ಕೋಟ್ಯಾಳ ಇವರ ಹೊಲದವರೆಗೆ ರಸ್ತೆ ನಿರ್ಮಾಣ | 73,000–00 | 24,030–00 | 48,970–00 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ |
| 12. | ಅಡಿಹುಡಿ ಗ್ರಾಮದ ಹರಿಜನ ವಸತಿಯಿಂದ ಕುಲಕರ್ಣಿ ತೋಟದ ಹಳ್ಳದ ಹೂಳು ಎತ್ತುವ ಕಾಮಗಾರಿ | 1,42,973–00 | – | – | ಸದರಿ ಕಾಮಗಾರಿಯು ಸನ್ 2011–12ನೇ ಸಾಲಿನಲ್ಲಿ ಆಗಿದ್ದು, ಕಾಮಗಾರಿಯ ಕುರುಹುಗಳು ಲಭ್ಯವಿರದೇ ಇರುವುದರಿಂದ ಹಾಗೂ ಅಳತೆ ಪುಸ್ತಕದಲ್ಲಿ ಪ್ರಾಥಮಿಕ ಹಾಗೂ ಅಂತಿಮ ಹಂತಗಳನ್ನು ನಮೂದಿಸದೇ ಇರುವುದರಿಂದ ಮೌಲ್ಯ ಮಾಪನ ಮಾಡಲು ಸಾಧ್ಯವಾಗಿರುವುದಿಲ್ಲ. |
| 13. | ಅಡಿಹುಡಿ ಗ್ರಾಮದ | | 34,621–71 | 15,108–29 | ಅಪೂರ್ಣ ಕಾಮಗಾರಿ |

| | | | | | |
|---|---|---|---|---|---|
| | ಬೆಳಗಲಿ ವಸತಿಯಿಂದ ಕಡಪಟ್ಟಿ ವಸ್ತಿ ವರೆಗೆ ಸ್ಟ್ರಾಮ ವಾಟರ್ ಕಾಲುವೆ ನಿರ್ಮಾಣ | 49,730–00 | | | ಮಾಡಿರುತ್ತಾರೆ. |
| 14. | ಅಡಿಹುಡಿ ಗ್ರಾಮದ ಬೀರಪ್ಪ ಗುಗ್ಗರಿ ಇವರ ಜಮೀನಲ್ಲಿಯ ಹಳ್ಳದ ಹೂಳು ಎತ್ತುವ ಕಾಮಗಾರಿ | 1,76,889–00 | – | – | ಸದರಿ ಕಾಮಗಾರಿಯು ಸನ್ 2011–12ನೇ ಸಾಲಿನಲ್ಲಿ ಆಗಿದ್ದು, ಕಾಮಗಾರಿಯ ಕುರುಹುಗಳು ಲಭ್ಯವಿರದೇ ಇರುವುದರಿಂದ ಹಾಗೂ ಅಳತೆ ಪುಸ್ತಕದಲ್ಲಿ ಪ್ರಾಥಮಿಕ ಹಾಗೂ ಅಂತಿಮ ಹಂತಗಳನ್ನು ನಮೂದಿಸದೇ ಇರುವುದರಿಂದ ಮೌಲ್ಯ ಮಾಪನ ಮಾಡಲು ಸಾಧ್ಯವಾಗಿರುವುದಿಲ್ಲ. |
| 15. | ಅಡಿಹುಡಿ ಗ್ರಾಮದ ನಾವಿ ವಸ್ತಿ ವರೆಗೆ ರಸ್ತೆ ಸುಧಾರಣೆ ಕಾಮಗಾರಿ | 77,610–00 | 17,622–00 | 59,988–00 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ |
| 16. | ಅಡಿಹುಡಿ ಗ್ರಾಮದ ಶಿಂಧೆ ವಸತಿಯಿಂದ ಜಿರಾಳ ವಸತಿವರೆಗೆ ರಸ್ತೆ ಸುಧಾರಣೆ ಕಾಮಗಾರಿ | 52,375–00 | 51,406–40 | 968–60 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ |
| 17. | ಅಡಿಹುಡಿ ಗ್ರಾಮದ ಶ್ರೀಕಾಂತ ದ.ಪಾಂಡು ಚಾವ್ಹಾಣ ನಾಲಾಬದು ನಿರ್ಮಾಣ ಕಾಮಗಾರಿ | 1,20,000–00 | 1,20,000–00 | – | ಕಾಮಗಾರಿ ಮಾಡಿರುತ್ತಾರೆ |
| 18. | ಅಡಿಹುಡಿ ಗ್ರಾಮದ ಬೀಮಪ್ಪ ದೋಂಡಿಬಾ ಚವ್ಹಾಣ ಇವರ ಜಮೀನ ಹತ್ತಿರ ಹಳ್ಳದ ಹೂಳು ಎತ್ತುವ ಕಾಮಗಾರಿ | 1,20,120–00 | – | – | ಸದರಿ ಕಾಮಗಾರಿಯು ಸನ್ 2011–12ನೇ ಸಾಲಿನಲ್ಲಿ ಆಗಿದ್ದು, ಕಾಮಗಾರಿಯ ಕುರುಹುಗಳು ಲಭ್ಯವಿರದೇ ಇರುವುದರಿಂದ ಹಾಗೂ ಅಳತೆ ಪುಸ್ತಕದಲ್ಲಿ ಪ್ರಾಥಮಿಕ ಹಾಗೂ ಅಂತಿಮ ಹಂತಗಳನ್ನು ನಮೂದಿಸದೇ ಇರುವುದರಿಂದ ಮೌಲ್ಯ ಮಾಪನ ಮಾಡಲು ಸಾಧ್ಯವಾಗಿರುವುದಿಲ್ಲ. |
| 19. | ಅಡಿಹುಡಿ ಗ್ರಾಮದ ಸಾವಳಗಿ ರಸ್ತೆಯಿಂದ ಮುಂಜಿ ವಸ್ತಿಯವರೆಗೆ ರಸ್ತೆ ಕಾಮಗಾರಿ | 1,19,550–00 | 83,784–96 | 35,765–04 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ. |
| 20. | ಅಡಿಹುಡಿ ಗ್ರಾಮದ | | 28,088–40 | 72,761–60 | ಅಪೂರ್ಣ ಕಾಮಗಾರಿ |

| | | | | | |
|---|---|---|---|---|---|
| | ಚಹಾಪುಡಿ ರಸ್ತೆ ವಸತಿಯಿಂದ ಕರೆಭಾವಿ ಗುಡಿಯವರೆಗೆ ರಸ್ತೆ ರಿಪೇರಿ ಕಾಮಗಾರಿ | 1,00,850–00 | | | ಮಾಡಿರುತ್ತಾರೆ |
| 21. | ಅಡಿಹುಡಿ ಗ್ರಾಮದ ಒಡೆಯರ ರಸ್ತೆಯಿಂದ ತುಬಚಿ ಚೌರಿ ವಸ್ತಿ ರಸ್ತೆ ಕಾಮಗಾರಿ | 1,75,580–00 | 1,23,120–00 | 52,460–00 | ಅಪೂರ್ಣ ಕಾಮಗಾರಿ ಮಾಡಿರುತ್ತಾರೆ |
| 22. | ಅಡಿಹುಡಿ ಗ್ರಾಮದ ಅಡಿವೆಪ್ಪ ತಮ್ಮಣ್ಣಾ ಗುಗ್ಗರಿ ಬದು ನಿರ್ಮಾಣ ಕಾಮಗಾರಿ | 12,250–00 | 12,643–78 | – | ಕಾಮಗಾರಿ ಮಾಡಿರುತ್ತಾರೆ |
| 23. | ಅಡಿಹುಡಿ ಗ್ರಾಮದ ಗಿರಮಲ್ಲ ಕೆಂಚಪ್ಪ ಗುಗ್ಗರಿ ಬದು ನಿರ್ಮಾಣ ಕಾಮಗಾರಿ | 12,250–00 | 12,643–78 | – | ಕಾಮಗಾರಿ ಮಾಡಿರುತ್ತಾರೆ |
| 24. | ಅಡಿಹುಡಿ ಗ್ರಾಮದ ಊರ ಸುತ್ತಮುತ್ತ ಕಂಠಿ ಕಡಿಯುವುದು ಹಾಗೂ ತಗ್ಗು ದಿನ್ನಿ ತುಂಬುವುದು. | 94,215–00 | – | – | ಸದರಿ ಕಾಮಗಾರಿಯು ಸನ್ 2011–12 ನೇ ಸಾಲಿನಲ್ಲಿ ಆಗಿದ್ದು, ಗ್ರಾಮದ ಸುತ್ತಮುತ್ತ ಗಿಡಗಂಟಿ ಬೆಳೆದಿರುತ್ತವೆ. ಅಳತೆ ಪುಸ್ತಕದಲ್ಲಿ ಪ್ರಾಥಮಿಕ & ಅಂತಿಮ ಹಂತಗಳನ್ನು ನಮೂದಿಸದೇ ಇರುವುದರಿಂದ ಮೌಲ್ಯ ಮಾಪನ ಮಾಡಲು ಸಾಧ್ಯವಾಗಿರುವುದಿಲ್ಲ. |
| | | | ಒಟ್ಟು ರೂ | 8,68,553.17 | |

ix) ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರು ಸಲ್ಲಿಸಿದ ವರದಿಯನ್ನು ಪರಿಶೀಲಿಸಲಾಗಿ ಕ್ರ.ಸಂ. 1, 2, 3, 4, 6, 7, 10, 11, 13, 15, 16, 19, 20, 21 ನಮೂದಿಸಿದ ಕಾಮಗಾರಿಗಳನ್ನು ಅಪೂರ್ಣವಾಗಿ ಮಾಡಿರುವುದು ಮತ್ತು ಕ್ರ.ಸಂ. 8 ರಲ್ಲಿಯ ಕಾಮಗಾರಿಯನ್ನು ಮಾಡದೇ ಇರುವುದು ಕಂಡುಬರುತ್ತದೆ. 1 ಮತ್ತು 2 ನೇ ಎದುರುದಾರರು ಕಾಮಗಾರಿಗಳನ್ನು ಸರಿಯಾಗಿ ಮಾಡದೆ ಇದ್ದರೂ ಸಹ ಮಾಡಿದ ಹಾಗೆ ಎಂ.ಬಿ ಪುಸ್ತಕದಲ್ಲಿ ಸುಳ್ಳು ಅಳತೆಗಳನ್ನು ನಮೂದಿಸಿರುತ್ತಾರೆ. ಮೇಲ್ಕಂಡ ಕಾಮಗಾರಿಗಳನ್ನು ಅಪೂರ್ಣವಾಗಿ ಮಾಡಿದ್ದರೂ/ಮಾಡದೆ ಇದ್ದರೂ 3ನೇ

ಎದುರುದಾರರು ಹಣ ಬಟವಡೆ ಮಾಡಿ ಅಧಿಕಾರ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಅನುಕ್ರಮ ಸಂಖ್ಯೆ: 13 ರಲ್ಲಿ ಹೇಳಿದ ಕಾಮಗಾರಿಯನ್ನು ಅಂಗವಿಕಲನಾದ ಲಕ್ಕಪ್ಪ ವಿಠೋಬಾ ಬೆಳಗಲಿ ಇವರು ಮಾಡದೆ ಇದ್ದರೂ ಮಾಡಿದಂತೆ ಸದರಿಯವರ ಹೆಸರನ್ನು ಕೂಲಿಕಾರ್ಮಿಕರ ಪಟ್ಟಿಯಲ್ಲಿ ಸೇರಿಸಿ ಹಣ ಬಟವಡೆ ಮಾಡಿ 3ನೇ ಎದುರುದಾರರು ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡಿರುತ್ತಾರೆ. ನರೆಗಾ ಯೋಜನೆ ಅಡಿಯಲ್ಲಿ ಕೂಲಿಕಾರ್ಮಿಕರಿಂದ ಕಾಮಗಾರಿಯನ್ನು ಮಾಡಿಸಬೇಕಾಗಿದ್ದು, ನೆಪ ಮಾತ್ರಕ್ಕೆ ಕೂಲಿಕಾರ್ಮಿಕರಿಂದ ಮಾಡಿಸಿ, ಬಹುತೇಕ ಕೆಲಸವನ್ನು ಯಂತ್ರೋಪಕರಣದ ಸಹಾಯದಿಂದ ಮಾಡಿಸುವ ಮೂಲಕ ನರೆಗಾ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುತ್ತಾರೆ. ಎದುರುದಾರರುಗಳು ಬಹುತೇಕ ಕಾಮಗಾರಿಗಳನ್ನು ಅಪೂರ್ಣವಾಗಿ ಮಾಡಿ, ಕೆಲವೊಂದು ಕಾಮಗಾರಿಗಳನ್ನು ಮಾಡದೇ ಇದ್ದರೂ, ಮಾಡಿದ ಹಾಗೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ರೂ. 8,68,553.17 ರಷ್ಟು ಹಣವನ್ನು ದುರುಪಯೋಗ ಪಡಿಸಿಕೊಂಡು ಸರ್ಕಾರಕ್ಕೆ ಮೋಸ ಮಾಡಿರುತ್ತಾರೆ.

3. 1 ರಿಂದ 3ನೇ ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯು ಜಾರಿಯಾಗಿದ್ದು, ಸದರಿಯವರುಗಳು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

1ನೇ ಎದುರುದಾರರ ಸಮಜಾಯಿಷಿ ಏನೆಂದರೆ, ತಾನು ಜಲಾನಯನ ಅಭಿವೃದ್ಧಿ ಅಧಿಕಾರಿಯಾಗಿ ಜಮಖಂಡಿಯಲ್ಲಿ ಕೆಲಸ ಮಾಡುತ್ತಿದ್ದಾಗ ಪರಿವೀಕ್ಷಣಾ ಟಿಪ್ಪಣಿಯಲ್ಲಿ ನಮೂದಿಸಿದ ಕಾಲಂ ನಂ.1,5,9,12,14,17,18,22 ಮತ್ತು 23 ಈ ಕಾಮಗಾರಿಗಳನ್ನು ತಾನು ನಿರ್ವಹಿಸಿದ್ದು, ಮಹಾದೇವ ಜಿರಾಳೆ ಸಾ: ಅಡಿಹುಡಿ ಹಾಗೂ ಪಂಚಾಯತ್ ಸದಸ್ಯರ ವೈಯಕ್ತಿಕ ದ್ವೇಷದಿಂದ ಪ್ರಸ್ತುತ ದೂರನ್ನು ನೀಡಲಾಗಿರುತ್ತದೆ. ಕ್ರಿಯಾ ಯೋಜನೆಯು ಜಿಲ್ಲಾ ಪಂಚಾಯತ್‌ಯಿಂದ ಅನುಮೋದನೆಗೊಂಡ ನಂತರ ಅಂದಾಜು ಪ್ರತಿಕೆಯನ್ನು ತಯಾರಿಸಲಾಗಿರುತ್ತದೆ. ಕೂಲಿಕಾರರನ್ನು ಹಚ್ಚಿ ಕಾಮಗಾರಿಯನ್ನು ನೆರವೇರಿಸಿದ್ದು, ಎನ್‌ಎಂಆರ್ ಪ್ರಕಾರ ಕೂಲಿಯನ್ನು ಬಟವಡೆ ಮಾಡಲಾಗಿರುತ್ತದೆ. ಲೋಕಾಯುಕ್ತ ಅಧಿಕಾರಿಗಳು ಕಾಮಗಾರಿಯನ್ನು

ಪರಿಶೀಲಿಸಲು ಬಂದಾಗ ತನಗೆ ತಿಳಿಸಿರುವುದಿಲ್ಲ. ತನ್ನ ಗೈರು ಹಾಜರಿಯಲ್ಲಿ ಕಾಮಗಾರಿಯ ಪರಿಶೀಲನೆ ಮಾಡಿರುವುದು ನಿಯಮಾನುಸಾರ ಸರಿಯಲ್ಲ. ಕಾಮಗಾರಿಯಲ್ಲಿ ಅವ್ಯವಹಾರ ಆಗಿರುವುದಿಲ್ಲ. ಕಾಮಗಾರಿ ನಡೆದಂತೆ ಅಳತೆಯನ್ನು ಎಂ.ಬಿ. ಪುಸ್ತಕದಲ್ಲಿ ದಾಖಲಿಸಲಾಗಿದೆ. ಕಾಮಗಾರಿಯನ್ನು ಅಂದಾಜು ಪಟ್ಟಿಯಂತೆ ನೆರವೇರಿಸಿದ್ದು, ಕಾಮಗಾರಿ ಮಾಡದೇ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿರುವುದಿಲ್ಲ. ಆದ್ದರಿಂದ ದೂರನ್ನು ಮುಕ್ತಾಯ ಮಾಡಲು ಕೇಳಿಕೊಂಡಿರುತ್ತಾರೆ.

4. 2ನೇ ಎದುರುದಾರರು ತನ್ನ ಸಮಜಾಯಿಷಿಯಲ್ಲಿ, ತಾನು 2011–12 ನೇ ಸಾಲಿನಲ್ಲಿ ಜಮಖಂಡಿ ಉಪವಿಭಾಗದ ಪಂಚಾಯತ್ ರಾಜ್ ಇಲಾಖೆಯಲ್ಲಿ ಕಿರಿಯ ಇಂಜಿನಿಯರ್‌ರಾಗಿ ಕೆಲಸ ಮಾಡಿದ್ದು, ಪರಿವೀಕ್ಷಣಾ ಟಿಪ್ಪಣಿಯಲ್ಲಿ ನಮೂದಿಸಿದ 24 ಕಾಮಗಾರಿಗಳ ಪೈಕಿ ತಾನು 14 ಕಾಮಗಾರಿಗಳನ್ನು ಮಾಡಿರುವುದಾಗಿ ಬರೆದುಕೊಂಡಿದ್ದಾರೆ. ಪೊಲೀಸ್ ನೀರಿಕ್ಷಕರು, ಬಾಗಲಕೋಟೆ ಇವರು ಕಾಮಗಾರಿಯನ್ನು ಪರಿವೀಕ್ಷಣೆ ಮಾಡುವ ಕಾಲಕ್ಕೆ ತನಗೆ ಹಾಜರಿರಲು ನೋಟಿಸ್ ನೀಡಿರುವುದಿಲ್ಲ. ತನ್ನ ಗೈರು ಹಾಜರಲ್ಲಿ 8 ಕಾಮಗಾರಿಯ ಕುರಿತಂತೆ ಮಹಜರ್ ಮಾಡಿದ್ದು, ಅದನ್ನು ತಾನು ಒಪ್ಪುವುದಿಲ್ಲ. ಕಾಮಗಾರಿ ಮಾಡಿದ 3 ವರ್ಷಗಳ ನಂತರ ಕಾಮಗಾರಿಗಳನ್ನು ಪರಿವೀಕ್ಷಣೆ ಮಾಡಿದ್ದು, ಯಾವುದೇ ಕುರುಹುಗಳು ಉಳಿಯಲು ಸಾಧ್ಯವಿಲ್ಲ. ನರೇಗಾ ನಿಯಮದಂತೆ ಕಾಮಗಾರಿಯನ್ನು ನೆರವೇರಿಸಲಾಗಿರುತ್ತದೆ. ಪಿಡಿಓ ರವರು ನೊಂದಾಯಿತ ಕೂಲಿ ಜನರನ್ನು ನೇಮಿಸಿರುತ್ತಾರೆ. ಎನ್.ಎಂ.ಆರ್‌ನ್ನು 3ನೇ ಎದುರುದಾರರಾದ ಪಿಡಿಓರವರು ನಿರ್ವಹಿಸಿರುತ್ತಾರೆ. ಕಾಮಗಾರಿಯನ್ನು ತಾನು ಪರಿವೀಕ್ಷಣೆ ಮಾಡಿದ್ದು, ಕಾಮಗಾರಿ ನಡೆದಂತೆ ಅಳತೆಗಳನ್ನು ಎಂ.ಬಿ ಪುಸ್ತಕದಲ್ಲಿ ನಮೂದಿಸಿರುತ್ತೇನೆ. ಎಂ.ಬಿ ಪುಸ್ತಕವನ್ನು ನೋಡಿ ಪಿಡಿಓ ರವರು ಬಿಲ್ಲನ್ನು ಸಂದಾಯ ಮಾಡಿದ್ದಾರೆ. ಆದ್ದರಿಂದ ದೂರನ್ನು ಮುಕ್ತಾಯಗೊಳಿಸಲು ಕೇಳಿಕೊಂಡಿದ್ದಾರೆ.

5. 3ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ, ತಾನು ತೊದಲಬಾಗಿ ಗ್ರಾಮ ಪಂಚಾಯತಿಯ ಪ್ರಭಾರ ಪಿಡಿಓ ಆಗಿ ಕೆಲಸ ಮಾಡಿದ್ದು, ತನಿಖಾಧಿಕಾರಿಗಳು ಸರಿಯಾದ ನಿಖರವಾದ ತನಿಖೆಯನ್ನು ಮಾಡದೇ ಖೊಟ್ಟಿ

ವರದಿಯನ್ನು ಸಲ್ಲಿಸಿದ್ದಾರೆ. ದೂರನ್ನು ಚುನಾಯಿತ ಪ್ರತಿನಿಧಿಗಳು ತಮ್ಮ ಚುನಾವಣಾ ವೈಕ್ಷಮ್ಯವನ್ನು ಸಾಧಿಸಿಕೊಳ್ಳಲು ಈ ದೂರನ್ನು ದಾಖಲಿಸಿರುತ್ತಾರೆ. ತಾನು ಅತ್ಯಂತ ಶ್ರದ್ಧೆಯಿಂದ ನಿಷ್ಠೆಯಿಂದ ಕೆಲಸ ಮಾಡಿರುತ್ತೇನೆ. ಈ ಕುರಿತಂತೆ ಬಾಗಲಕೋಟೆ ಸತ್ರ ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಗೆ ಬಾಕಿ ಇರುತ್ತದೆ. ನ್ಯಾಯಾಲಯದಲ್ಲಿ ವಿಚಾರಣೆಯು ಬಾಕಿ ಇರುವಾಗ ಬೇರೆ ಅಧಿಕಾರಿಗಳಿಂದ ವಿಚಾರಣೆ ಪ್ರಾರಂಭಿಸುವುದು ಕಾನೂನು ಬಾಹಿರವಾಗಿರುತ್ತದೆ. ಈ ಮೇಲೆ ಹೇಳಿದ ಕಾರಣಗಳಿಂದಾಗಿ ತನ್ನ ಮೇಲೆ ದಾಖಲಿಸಿದ ದೂರನ್ನು ಮುಕ್ತಾಯಗೊಳಿಸಲು ಕೇಳಿಕೊಂಡಿರುತ್ತಾರೆ.

6. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಾಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ 1 ರಿಂದ 3ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ನಂಬಲು ಈ ಹಂತದಲ್ಲಿ ಬಲವಾದ ಹಾಗೂ ಸಮಂಜಸವಾದ ಆಧಾರಗಳು ಇರುವುದಿಲ್ಲ. ಎದುರುದಾರರುಗಳ ವಿರುದ್ಧ ಮಾಡಲಾದ ಆಪಾದನೆಗಳು ಗಂಭೀರ ಸ್ವರೂಪದ ಆಪಾದನೆಗಳಾಗಿದ್ದು, ಇಲಾಖಾ ವಿಚಾರಣೆ ನಡೆಸಿದ್ದಲ್ಲಿ ಪ್ರಕರಣದ ಸತ್ಯಾಸತ್ಯತೆಯನ್ನು ಅರಿತುಕೊಳ್ಳಬಹುದಾಗಿರುತ್ತದೆ. ಆದ್ದರಿಂದ, 1 ರಿಂದ 3ನೇ ಎದುರುದಾರರುಗಳು ಇಲಾಖಾ ವಿಚಾರಣೆಗೆ ಒಳಪಡಲು ಬಾಧ್ಯರಾಗಿರುತ್ತಾರೆ.

7. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆ ಹಾಗೂ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿ, 1 ರಿಂದ 3ನೇ ಎದುರುದಾರರುಗಳು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ದೆಯನ್ನು ಹೊಂದಿರದೇ ಇರುವುದು ಮತ್ತು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಕೆ.ಸಿ.ಎಸ್.ಆರ್ (ನಡತೆ) ನಿಯಮ 1966 ನಿಯಮ 3 (1) (i) to (iv) ಅನ್ನು ಉಲ್ಲಂಘಿಸುವ ಮೂಲಕ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

8. 1ನೇ ಎದುರುದಾರರು ದಿ:30.06.2021 ರಂದು ನಿವೃತ್ತಿ ಹೊಂದಿರುವುದರಿಂದ ಸದರಿಯವರ ವಿರುದ್ದ ಇಲಾಖಾ ವಿಚಾರಣೆ ನಡೆಸಲು ಕೆಸಿಎಸ್‌ಆರ್ ನಿಯಮ 214 (2)(ಬಿ) (i) ಅನುಮತಿಸಿ, ಅದೇ ನಿಯಮ 214 (2)(ಬಿ) (iii) ರ ಅನ್ವಯ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ

ಲೋಕಾಯುಕ್ತ ಕಾಯಿದೆ ಕಲಂ 12(3) ರ ಅನ್ವಯ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

ಅದೇ ಪ್ರಕಾರ 2 ಮತ್ತು 3ನೇ ಎದುರುದಾರರು ಇನ್ನು ಸೇವೆಯಲ್ಲಿದ್ದು, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ರ ಅನ್ವಯ ಅನುಮತಿಸಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅನ್ವಯ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ 3 ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

29/4/22

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**